**International Journal of Academic Research**
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-4, Oct-Dec-2025
This work is licensed under a Creative Commons Attribution 4.0 International License [CC BY 4.0]

**Research Article**

# ಜಾಗತೀಕರಣ: ಕನ್ನಡ ನುಡಿ ಮತ್ತು ಸಾಹಿತ್ಯ

**ಡಾ. ಜಯಶಂಕರ ಎಂ.**
ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರುಜಿಲ್ಲೆ.

**ಸಾರಲೇಖ:**

ಈ ಸಂಶೋಧನಾ ಲೇಖನವು ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡ ನುಡಿ ಮತ್ತು ಸಾಹಿತ್ಯದಲ್ಲಿ ಸಂಭವಿಸುತ್ತಿರುವ ಪಲ್ಲಟಗಳು, ಸಂಘರ್ಷಗಳು ಹಾಗೂ ಹೊಸ ಸಾಧ್ಯತೆಗಳನ್ನು ವಿಶ್ಲೇಷಿಸುತ್ತದೆ. ಉದಾರೀಕರಣ ಮತ್ತು ಖಾಸಗೀಕರಣದೊಂದಿಗೆ ತೊಂಬತ್ತರ ದಶಕದಲ್ಲಿ ತೀವ್ರಗೊಂಡ ಜಾಗತೀಕರಣವನ್ನು ಮಾರುಕಟ್ಟೆ, ಬಂಡವಾಳ ಮತ್ತು ವಾಣಿಜ್ಯ ವಿಸ್ತರಣೆಯ ಪ್ರಕ್ರಿಯೆಯಾಗಿ ಗುರುತಿಸಲಾಗಿದ್ದು, ಅದರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕ ಪರಿಣಾಮಗಳನ್ನು ಪರಿಶೀಲಿಸಲಾಗಿದೆ. ಕನ್ನಡ ಭಾಷೆ ಅನಾದಿಕಾಲದಿಂದಲೂ ಸಂಸ್ಕೃತ, ಪ್ರಾಕೃತ, ತಮಿಳು, ತೆಲುಗು, ಮರಾಠಿ, ಉರ್ದು, ಅರೇಬಿಕ್, ಪರ್ಷಿಯನ್ ಮೊದಲಾದ ಭಾಷೆಗಳೊಂದಿಗೆ ಸಂಪರ್ಕ, ಕೊಡು-ಕೊಳ್ಳುವಿಕೆ ಮತ್ತು ರೂಪಾಂತರಗಳ ಮೂಲಕ ಬೆಳೆಯುತ್ತ ಬಂದಿರುವುದನ್ನು ಲೇಖನವು ಪ್ರತಿಪಾದಿಸುತ್ತದೆ. ಇಂಗ್ಲಿಷ್ ಪ್ರಭಾವದಿಂದ ಉಂಟಾಗುತ್ತಿರುವ ಭಾಷಾ ಬದಲಾವಣೆಗಳನ್ನು ಭಾಷಾ ಪರಿಶುದ್ಧತೆಯ ನೆಲೆಯಲ್ಲಿ ನೋಡುವುದನ್ನು ಪ್ರಶ್ನಿಸಿ, ಭಾಷೆಯ ಸಹಜ ಚಲನಶೀಲತೆಯನ್ನು ಗುರುತಿಸುತ್ತದೆ. ಪಂಪ, ವಚನಕಾರರು, ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮೊದಲಾದವರ ಕೃತಿಗಳ ನೆಲೆಯಲ್ಲಿ ಕನ್ನಡ ಸಾಹಿತ್ಯವು ಅನ್ಯ ಜಗತ್ತುಗಳ ಮುಖಾಮುಖಿಯಿಂದ ಸೃಜನಶೀಲವಾಗಿ ಬೆಳೆದಿರುವುದನ್ನು ವಿಶ್ಲೇಷಿಸಲಾಗಿದೆ. ಜಾಗತೀಕರಣವು ಸಾಹಿತ್ಯದ ವಸ್ತು, ಅಭಿವ್ಯಕ್ತಿ ಮತ್ತು ಸಾಮಾಜಿಕ ಅನುಭವಗಳಿಗೆ ಹೊಸ ಆಯಾಮಗಳನ್ನು ಒದಗಿಸುವುದರ ಜೊತೆಗೆ ದಲಿತರು ಮತ್ತು ಸ್ತ್ರೀಯರಂತಹ ಅಂಚಿನ ಸಮುದಾಯಗಳಿಗೆ ಹೊಸ ಅವಕಾಶಗಳನ್ನೂ ಸೃಷ್ಟಿಸಿದೆ ಎಂಬ ವಿಚಾರವನ್ನು ಲೇಖನವು ಮುಂದಿಡುತ್ತದೆ.

**ಪ್ರಮುಖ ಪದಗಳು:** ಜಾಗತೀಕರಣ, ಕನ್ನಡ ನುಡಿ, ಕನ್ನಡ ಸಾಹಿತ್ಯ, ಭಾಷಾ ಪಲ್ಲಟ, ಭಾಷಾ ವೈವಿಧ್ಯ, ಇಂಗ್ಲಿಷ್ ಪ್ರಭಾವ, ಭಾಷಾ ಪರಿಶುದ್ಧವಾದ, ಸಾಂಸ್ಕೃತಿಕ ಮುಖಾಮುಖಿ, ಮಾರುಕಟ್ಟೆ ಸಂಸ್ಕೃತಿ, ವಿಶ್ವಗ್ರಾಮ, ಭಾಷಾ ಸಂವಹನ, ದೇಸೀ ಅಸ್ಮಿತೆ, ಸಾಂಸ್ಕೃತಿಕ ಜಾಗತೀಕರಣ, ಸಾಂಸ್ಕೃತಿಕ ಅನ್ಯತೆ.

**ಜಾಗತೀಕರಣ: ಕನ್ನಡ ನುಡಿ ಮತ್ತು ಸಾಹಿತ್ಯ.**

ಭಾರತದ ಸದ್ಯದ ಸನ್ನಿವೇಶದಲ್ಲಿ ನಡೆಯುತ್ತಿರುವ ಎಲ್ಲ ಬಗೆಯ ಪಲ್ಲಟಗಳಿಗೂ ಜಾಗತೀಕರಣವೇ ಕಾರಣ ಎಂಬ ನಿಲುವನ್ನು ಅತಿ ಸುಲಭವಾಗಿ ತಾಳಲಾಗುತ್ತಿದೆ. ಸಾಹಿತ್ಯ, ಭಾಷೆ, ಕೃಷಿ, ಮಾರುಕಟ್ಟೆಯ ತಲ್ಲಣಗಳು, ರಾಜಕಾರಣ, ನಮ್ಮ ಜೀವನಕ್ರಮ, ಸಾಂಸ್ಕೃತಿಕ ಲೋಕದೊಳಗೆ ಜರುಗುತ್ತಿರುವ ವಿಘಟನೆಗಳು, ಎಲ್ಲ ಜ್ಞಾನ ವಲಯಗಳಲ್ಲಾಗುತ್ತಿರುವ ಬದಲಾವಣೆಗಳು ಇತ್ಯಾದಿಗಳಿಗೂ ಜಾಗತೀಕರಣವೇ ಕಾರಣೀಭೂತ ಎಂಬುದನ್ನು ತಿಳಿಯಲಾಗುತ್ತಿದೆ. ತೃತೀಯ ಜಗತ್ತಿನ ರಾಷ್ಟ್ರಗಳೂ ಅದರಲ್ಲೂ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಈ ನಂಬಿಕೆ ಬಲವಾಗಿ ಬೇರೂರಿರುವಂತಿದೆ.

ಜಾಗತೀಕರಣ ಎಂದರೇನು? ನಾವೆಲ್ಲ ತಿಳಿದಿರುವಂತೆ ಇದು ಕಳೆದ ಶತಮಾನದ ಕೊನೆಯ ದಶಕಗಳಲ್ಲಿ ಆರಂಭವಾದ ವಿದ್ಯಮಾನವೇ? ಇದರ ಎದುರು ನಾವೇಕೆ ಆತಂಕಿತರಾಗಬೇಕು? ಇದರಿಂದ ನಮ್ಮ ನುಡಿ ಮತ್ತು ಸಾಹಿತ್ಯ ಹೇಗೆ ದಿಕ್ಕೆಡುತ್ತವೆ? ಈ ಎಲ್ಲ ವಿಚಾರಗಳ ಅನುಸಂಧಾನ ಮಹತ್ವವೂ ಆಳವೂ ವಿಶಾಲವೂ ಹಾಗೂ ಸಂಕೀರ್ಣವೂ ಆದುದಾಗಿದೆ. ಈ ಬರಹದಲ್ಲಿ ಕೆಲವು ಟಿಪ್ಪಣಿಗಳ ಮೂಲಕ ನನ್ನ ಕೆಲವು ಅಭಿಪ್ರಾಯ ಮತ್ತು ನಿಲುವಗಳನ್ನು ಮಂಡಿಸುತ್ತಿದ್ದೇನೆ.

ಉದಾರೀಕರಣ, ಖಾಸಗೀಕರಣಗಳೊಡನೆ ಇಪ್ಪತ್ತನೇ ಶತಮಾನದ ತೊಂಬತ್ತರ ದಶಕದಲ್ಲಿ ರೂಪುಪಡೆದ ಜಾಗತೀಕರಣ ಎಂಬ ಪದ, ಪರಿಕಲ್ಪನೆಯು ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆ, ಮಾರುಕಟ್ಟೆಯ ವಹಿವಾಟು, ಬಂಡವಾಳ ಜಗತ್ತು, ವಾಣಿಜ್ಯ ವ್ಯವಹಾರಗಳ ವಿಸ್ತರಣೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡದ್ದು. ಅಂದರೆ ಜಗತ್ತನ್ನು ಒಂದು ಸೂರಿನ ಅಡಿಯಲ್ಲಿ ತರುವ, ಮುಕ್ತ ಮಾರುಕಟ್ಟೆಯನ್ನು ಹಾಗೂ ಹಣಕಾಸಿನ ವಹಿವಾಟನ್ನು

ಸಾಧ್ಯವಾಗಿಸುವ ಗ್ಲೋಬಲ್ ವಿಲೇಜ್ (ವಿಶ್ವಗ್ರಾಮ)ನ ಸ್ವರೂಪ ಜಾಗತೀಕರಣಕ್ಕಿದೆ. ವಿಶ್ವದ ಬಲಿಷ್ಟ ರಾಷ್ಟ್ರಗಳ ತಂತ್ರವಾಗಿ, ಉಪಾಯವಾಗಿ ಒಡಮೂಡಿದ ಜಾಗತೀಕರಣ, ಉಪಭೋಗಿ ಜೀವನವನ್ನು ಮಹತ್ವ ಅಂದುಕೊಳ್ಳದ ತನ್ನ ಸಾಂಸ್ಕೃತಿಕ ವೈವಿಧ್ಯವನ್ನು, ದೇಸೀ ಸೊಬಗಿನ ಮೂಲಕ ತನ್ನ ಅಸ್ಮಿತೆಯನ್ನು ಸ್ಥಾಪಿಸಲೆತ್ನಿಸುವ ಭಾರದದಂತಹ ದೇಶಗಳಗೆ ಮಾರುಕಟ್ಟೆಯ ಆಯಾಮದಿಂದ ಯಾವ ಲಾಭವೂ ಇಲ್ಲ. ಈ ಹಿನ್ನೆಲೆಯಿಂದ ನೋಡಿದರೆ ಜಾಗತೀಕರವು ಜಗತ್ತಿನ ಶಕ್ತ ದೇಶಗಳು ಉಳಿದ 'ಅಶಕ್ತ' ದೇಶಗಳನ್ನು ಎಲ್ಲ ದಿಕ್ಕಿನಿಂದಲೂ ತಮ್ಮ ಹಿಡಿತಕ್ಕೆ ತಂದುಕೊಳ್ಳುವ ಒಂದು ಬಗೆಯ ರಾಜಕೀಯ ಹುನ್ನಾರದಂತೆ ಕಾಣುತ್ತದೆ. ಈ ಅರ್ಥದಲ್ಲಿ ಜಾಗತೀಕರಣವು ವಸಾಹತೀಕರಣ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹೊಸ ರೂಪವೇ ಆಗಿದೆ.

ಜಾಗತೀಕರಣವೂ ನಮ್ಮ ದೇಸಿ ಬದುಕಿನ ಲಯಗಳನ್ನು ಪಲ್ಲಟಗೊಳಿಸುತ್ತಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗೆಯೇ ನಮ್ಮ ನುಡಿ ಹಾಗೂ ಸಾಹಿತ್ಯ ಸ್ವರೂಪಗಳೂ ಇದರ ನೆರಳಿನಲ್ಲಿ ಹಲವು ಬದಲಾವಣೆಗಳಿಗೆ ಸಂಘರ್ಷಗಳಿಗೆ ಎದುರಾಗುತ್ತಿವೆ. ಉಳಿದ ವಲಯಗಳಿಗಿಂತ ಭಾಷೆ ಮತ್ತು ಸಾಹಿತ್ಯಗಳು ತಮಗಿರುವ ಅನನ್ಯ ಗುಣಗಳಿಂದಾಗಿ ಜಾಗತೀಕರಣದಂತಹ ಹೊಸ ಹೊರಗಿನ ಅನುಭವಗಳನ್ನು ವಿಶಿಷ್ಟ ರೀತಿಯಲ್ಲಿ ಮುಖಾಮುಖಿಯಾಗುತ್ತವೆ.

ಜಾಗತೀಕರಣ ತಂದೊಡ್ಡುವ ಹಲ ಬಗೆಯ ಬಿಕ್ಕಟ್ಟು ಮತ್ತು ಸಂಘರ್ಷಗಳನ್ನು ಅಧ್ಯಯನ ಮಾಡಲು ಕನ್ನಡ ಚಿಂತನೆಯಲ್ಲಿ ನಾವು ಎರಡು ಮುಖ್ಯ ನೆಲೆಗಳನ್ನು ಹುಡುಕಿಕೊಳ್ಳಬಹುದು. ಒಂದು - ಜಾಗತೀಕರಣವನ್ನು ದೊಡ್ಡ ದೇಶಗಳ ಹುನ್ನಾರವನ್ನಾಗಿ ಕಂಡ ನಮ್ಮ ನಾಡಿನ ಮಹತ್ವದ ಹೋರಾಟಗಾರರೂ ಚಿಂತಕರೂ ಆದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಚಿಂತನಾ ನೆಲೆ. ಎರಡು - ಜಾಗತೀಕರಣವನ್ನು ಹಲವು ಮುಕ್ತ ಅವಕಾಶಗಳನ್ನು ತಂದೊಡ್ಡುವ ಪ್ರಕ್ರಿಯೆಯನ್ನಾಗಿ ಕಂಡ ನಮ್ಮ ಶ್ರೇಷ್ಠ ಬರಹಗಾರ ಪೂರ್ಣಚಂದ್ರ ತೇಜಸ್ವಿ ಅವರ ಚಿಂತನಾ ನಲೆ. ಈ ಎರಡು ಮಾದರಿಗಳು ಜಾಗತೀಕರಣದ ಅನುಸಂಧಾನಕ್ಕೆ ನಮಗೆ ಮಹತ್ತರವಾದ ಹತಾರಗಳಾಗಿ ಒದಗಿ ಬರಬಲ್ಲವು.

ನುಡಿ ಮತ್ತು ಸಾಹಿತ್ಯದ ಹಿನ್ನಲೆಯಿಂದ ನೋಡುವುದಾದರೆ ಜಾಗತೀಕರಣವೂ ಹೊಸದೇ? ಅಲ್ಲ. ಪದ ಹೊಸದು ಅಷ್ಟೇ. ಇದರ ಅನುಭವ ಹಾಗೂ ಪ್ರಕ್ರಿಯೆ ತೀರಾ ಹಳೆಯದೇ. ಹಲವು ಜಗತ್ತುಗಳೊಡನೆ ಮುಖಾಮುಖಿಯಾಗುವ ಪ್ರಕ್ರಿಯೆಯನ್ನೇ ಜಾಗತೀಕರಣ ಅಂತ ಕರೆಯುವುದಾದರೆ ಕನ್ನಡ ಬದುಕು, ಭಾಷೆ, ಸಾಹಿತ್ಯ ಹಿಂದಿನಿಂದಲೂ ಎಷ್ಟು ಅನ್ಯ ಜಗತ್ತುಗಳೊಡನೆ ಮುಖಾಮುಖಿಯಾಗಿಲ್ಲ! ಬೆರೆತಿಲ್ಲ! ಹೊಸರೂಪ ಪಡೆದಿಲ್ಲ! ಅಲ್ಲವೇ? ಕನ್ನಡ ಭಾಷೆ ಮತ್ತು ಸಾಹಿತ್ಯ ಸಂಸ್ಕೃತ, ಪ್ರಾಕೃತ, ಉರ್ದು, ಮರಾಠಿ, ಅರೇಬಿಯಾ, ಪರ್ಷಿಯಾ ಇತ್ಯಾದಿ ಭಾಷಾ ಕೇಂದ್ರಿತ ಅನ್ಯ ಜಗತ್ತುಗಳೊಡನೆ ಬದುಕಿವೆ. ಪರಸ್ಪರ ಭಿನ್ನವೂ ವಿಶಿಷ್ಟವೂ ಆದ ಹಲವು ಸಾಂಸ್ಕೃತಿಕ ಸಮುದಾಯಕೇಂದ್ರಿತ ಜಗತ್ತುಗಳೊಡನೆ ಬದುಕಿವೆ. ಆದರೆ ತೊಂಬತ್ತರ ದಶಕದ ನಂತರ ಈ ಪ್ರಕ್ರಿಯೆಗೆ ವೇಗ ಬಂದದ್ದಂತೂ ನಿಜ. ಆಧುನೀಕರಣದ ವೇಗ ಹೆಚ್ಚಾದಂತೆಲ್ಲ ಜಾಗತೀಕರಣ ಮೊನಚಾಗುತ್ತಾ ಸಾಗಿ ಬಂದಿದೆ. ಕೂಗಿದರೆ ಕೇಳುವಷ್ಟು ದೂರದಲ್ಲಿ ಬದುಕುತಿದ್ದರೂ ಇಲ್ಲಿನ ಜಾತಿ ವ್ಯವಸ್ಥೆಯ ಭೀಕರವಾದ ರೋಗದಿಂದಾಗಿ ಬೇರೆಯವೇ ಆದ ಸಮುದಾಯಗಳಾಗಿ ಇದ್ದ ಅನ್ಯ ಜಾತೀಕೇಂದ್ರಿತ ಜಗತ್ತುಗಳೊಡನೆ ಬದುಕಿವೆ. ಹಾಗೆಯೇ ಮತೀಯ ಚೌಕಟ್ಟಿನೊಳಗೇ ಏರ್ಪಟ್ಟಿರುವ ಜಗತ್ತುಗಳ ನಡುವೆಯೂ ಬದುಕಿವೆ. ಹೀಗೆ ಜೊತೆಗೇ ಇದ್ದು ಪರಸ್ಪರ ಅನ್ಯವೇ ಆಗಿರುವ ಜಗತ್ತುಗಳೊಡನೆ ನಮ್ಮ ಭಾಷೆ ಮತ್ತು ಸಾಹಿತ್ಯಗಳು ಕೊಳುಕೊಡುಗೆ ನಡೆಸಿವೆ, ಒಡನಾಡಿವೆ.

ಮತ್ತೊಂದು ಮುಖ್ಯವಾದ ಅಂಶವೆಂದರೆ ಕುವೆಂಪು ಹೇಳಿರುವ 'ಓ ನನ್ನ ಚೇತನಾ ಆಗು ನೀ ಅನಿಕೇತನ' ಎನ್ನುವ 'ಅನಿಕೇತನ' ಕಲ್ಪನೆ ಮತ್ತು ವಿಶ್ವಮಾನವ' ಕಲ್ಪನೆಗಳು ಜಗತ್ತನ್ನೇ ಒಂದು ಎಂದು ಭಾವಿಸುವ ವಿಶ್ವಗ್ರಾಮದ ಅಂದರೆ ಜಾಗತೀಕರಣದ ಕಲ್ಪನೆಯಲ್ಲದೆ ಮತ್ತೇನು? ಕುವೆಂಪು ಅವರು ಈ ಕಲ್ಪನೆಯನ್ನು ಸುಮಾರು ಅರುವತ್ತು ವರ್ಷಗಳ ಹಿಂದೆಯೇ ಹೇಳಿದಾಗ ಜಗತ್ತು ತಮ್ಮ 'ರೂಪ ರೂಪಗಳನು ದಾಟಿ, ನಾಮಕೋಟಿಗಳನು ಮೀಟಿ' ಏಕೆ ಒಂದೇ ಸೂರಿನ ಅಡಿಯಲ್ಲಿ ಬರಲಿಲ್ಲ. ಯಾಕೆಂದರೆ ಕುವೆಂಪು ಅವರು ಹೇಳುತ್ತಿರುವುದು ಮಾನವನ ಮನೋಧರ್ಮ, ಜೀವನದೃಷ್ಠಿಯಲ್ಲಿ ಒಂದು ಸಮಾಜವಾದಿ, ಸಮತಾವಾದಿ ಮಾನವೀಯ ಧೋರಣೆ ಮೂಡಲಿ ಎಂಬ ನೆಲೆಯಲ್ಲಿ. ಜಾಗತೀಕರಣ ರೂಪುಗೊಂಡು ಇಡೀ ವಿಶ್ವವನ್ನು ಒಂದೇ ಸೂರಿನಡಿ ತರಲೆತ್ನಿಸುತ್ತಿರುವುದು ಕೊಳ್ಳುವ ಮಾರುವ ವಹಿವಾಟಿನ ತಾಣವಾದ ಮಾರುಕಟ್ಟೆ ನಿರ್ಮಾಣದ ಹಿನ್ನೆಲೆಯಲ್ಲಿ. ಇರಲಿ ಜಾಗತೀಕರಣದ ಆಗುಹೋಗುಗಳನ್ನು ಚರ್ಚಿಸುವುದು ಈ ಬರಹದ ಪ್ರಧಾನವಾದ ಉದ್ದೇಶವಲ್ಲ.

ಜಾಗತೀಕರಣದಿಂದಾಗಿ ಪ್ರಬಲವಾಗುತ್ತಿರುವ ಇಂಗ್ಲಿಶ್ ಭಾಷೆಯಿಂದಾಗಿ ನಮ್ಮ ಕನ್ನಡ ಭಾಷೆ ನಾಶವಾಗುತ್ತಿದೆ, ಬದಲಾಗುತ್ತಿದೆ, ಮರೆತು ಹೋಗುತ್ತಿದೆ- ಇತ್ಯಾದಿಗಳು ನಿಜ ಅನಿಸುವುದಿಲ್ಲ. ಭಾಷೆಗಳು ಬದಲಾಗಬಾರದೆ? ಇದ್ದಂತೆಯೇ ಇರಬೇಕೆ? ಹಾಗಾದರೆ ಭಾಷೆಗೆ ಒಂದು ನಿದಿಷ್ಟ ಮೂಲ ಸ್ವರೂಪ ಎಂಬುದು ಇದೆಯೆ? ಯಾವುದಾದರು ಒಂದು ಭಾಷೆಗೆ ಹಾಗೆ ಒಂದು ಮೂಲರೂಪ ಇರುವುದಿಲ್ಲ. ಭಾಷೆ ತನ್ನ ಕಾಲದ ತನಗೆ ಎದುರಾಗುವ ಇತರ ಭಾಷೆಗಳೊಡೆನೆ ಒಡನಾಡುತ್ತಲೇ ಸಾಗುವುದು ಭಾಷೆಯ ಲಕ್ಷಣ. ಕನ್ನಡ ಭಾಷೆ ಪ್ರಾಕೃತ, ಸಂಸ್ಕೃತ, ತಮಿಳು, ತೆಲುಗು, ಮರಾಠಿ, ಉರ್ದು, ಅರೇಬಿಕ್, ಪರ್ಷಯನ್ ಹೀಗೆ ಹಲವು ನುಡಿಗಳೊಡನೆ ಬೆರೆಯುತ್ತಲೇ ರೂಪುಗೊಳ್ಳುತ್ತಾ ಬಂದಿರುವುದು ನಮಗೆ ತಿಳಿದ ವಿಚಾರವೇ ಆಗಿದೆ.

ಇಂಗ್ಲಿಶ್ ಜಗತ್ತಿನ ಭಾಷೆ ಎನ್ನುವುದು ಮತ್ತೊಂದು ಭ್ರಮೆ. ನಾವು ವಸಾಹತೀಕರಣಕ್ಕೆ ಒಳಗಾದ ದೇಶವಾಗಿದ್ದರಿಂದ, ವಸಾಹತುಕಾರನ ಭಾಷೆ ಇಂಗ್ಲಿಶ್ ಆದ್ದರಿಂದ, ವಸಾಹತುಕಾರನಿಂದಲೇ ಎಲ್ಲ ವಲಯಗಳಲ್ಲೂ ಮಹತ್ತರ ಬದಲಾವಣೆಗಳಿಗೆ ಭಾರತ ಪಕ್ಕಾದ್ದರಿಂದ, ಅಂಥ ದೇಶದೊಳಗಣ ಒಂದು ಕಿರುರಾಷ್ಟ್ರವಾದ ಕನ್ನಡದ ಮೂಲಕ ನೋಡುತ್ತಿರುವುದರಿಂದ ನಮಗೆ ಮೇಲಿನ ಭ್ರಮೆ ಮೂಡುತ್ತಿದೆ. ಆಧುನಿಕವಾದರೂ, ಜಾಗತೀಕರಣಕ್ಕೆ ಒಳಗಾದರೂ ಇಂಗ್ಲಿಶ್ ಭಾಷೆಯನ್ನು ಸಮರ್ಥವಾಗಿ ಬಳಸಲು ಬಾರದ ದೇಶಗಳು ಇವೆ ಎನ್ನುವುದನ್ನು ನಾವು ಮರೆಯಬಾರದು.

ಕನ್ನಡ ಭಾಷೆಯ ಸ್ವರೂಪ ಜಾಗತೀಕರಣದಿಂದ ಬದಲಾಗುತ್ತಿದೆ ಎನ್ನುವುದು ನಿಜ. ಬದಲಾಗಬಾರದೆ? ಭಾಷೆ ಬದಲಾಗಬಾರದು. ಇದ್ದ ಸ್ವರೂಪದಲ್ಲೇ ಶುದ್ಧವಾಗಿ ಇರಬೇಕು ಎನ್ನುವುದು ಭಾಷಾ ಪರಿಶುದ್ಧತಾವಾದ. ಮೇಲೆ ಉಲ್ಲೇಖಿಸಿರುವ ತನ್ನ ಸಹನುಡಿಗಳೊಡನೆಯೇ ಕೊಡುತ್ತಾ ಪಡೆಯುತ್ತಾ ಸಾಗಿ ಬಂದಿರುವ ಕನ್ನಡ ಭಾಷೆ ಯಾವಕಾಲದಲ್ಲಿ ಶುದ್ಧವಾಗಿತ್ತು. ಭಾಷೆಗಳ ವಿಚಾರದಲ್ಲಿ ಶುದ್ಧ-ಅಶುದ್ಧ, ಪವಿತ್ರ- ಅಪವಿತ್ರ ಮೇಲು-ಕೀಳು ಈ ಪರಿಭಾಷೆಗಳು ಒಗ್ಗುವುದಿಲ್ಲ ಎಂಬುದನ್ನು ಈಗಾಗಲೇ ಭಾಷಾ ವಿಜ್ಞಾನ ಹೇಳಿದೆ. ಅಲ್ಲದೆ ಭಾಷೆಗಳಿಗೆ ಹುಟ್ಟು ಬೆಳವಣಿಗೆ ಮತ್ತು ಸಾವು - ಈ ಕ್ರಮಾಂಕದ ಗತಿ ಇರುವುದಿಲ್ಲವೆಂಬುದೂ, ಭಾಷೆ ಬದಲಾಗುತ್ತಾ ಪಾತ್ರ ಬದಲಿಸುತ್ತಾ ಹರಿವ ನದಿಯಂತೆ ಎಂಬುದೂ ನಮಗೆ ತಿಳಿದಿದೆ.

ಕನ್ನಡಕ್ಕೆ ಇಂಗ್ಲಿಶ್ ನಿಂದ ಮಾತ್ರವಲ್ಲದೆ ಬೇರಾವ ಭಾಷೆಗಳಿಂದ ಒದಗುತ್ತಿರುವ ಬದಲಾವಣೆಗಳನ್ನು, ಅಥವಾ ಭಾಷಾ ಪರಿಶುದ್ಧವಾದಿಗಳು ಮಾತಿನಲ್ಲಿ ಹೇಳುವುದಾದರೆ ಅಪಾಯಗಳನ್ನು ನಮ್ಮ ಯಾವುದೇ ಬಗೆಯ ಕ್ರಿಯೆಗಳಿಂದ ನಿಲ್ಲಿಸಲಾಗುವುದಿಲ್ಲ ಅನಿಸುತ್ತದೆ. ಭಾಷೆ ಪಲ್ಲಟಗೊಳ್ಳುವ ವೇಗ ಇಂದು ತೀವ್ರವಾಗಿರುವುದರಿಂದ ಒಂದು ಸಹಜ ಆತಂಕ ನಮಗೆ ಎದ್ದು ತೋರುತ್ತಿರಬಹುದು. ಇಂಗ್ಲಿಶ್ ಭಾಷೆಯಿಂದಾಗಿ ನಮ್ಮ ನುಡಿಯೊಳಗಿನ ಧ್ವನಿ, ಪದ, ವಾಕ್ಯರಚನಾ ವಿನ್ಯಾಸಗಳು ಬದಲಾಗುತ್ತಿವೆ. ಮಾತ್ರವಲ್ಲದೆ ಹೊಸ ಪದಗಳ ಸ್ವೀಕರಣ, ನುಡಿ ಮಿಶ್ರಣ, ಕನ್ನಡ- ಇಂಗ್ಲಿಶ್ ಸಾಧಿತ ದ್ವಿಭಾಷಿಕತೆ ಮೊದಲಾದ ಪ್ರಕ್ರಿಯೆಗಳು ಜರುಗುತ್ತಿವೆ. ಇವುಗಳನ್ನು ದೂರವಿರಿಸಲು ಬರುವುದಿಲ್ಲವೇ? ಇಲ್ಲ ಅನಿಸುತ್ತದೆ. ಏಕೆಂದರೆ ಭಾಷೆ ಕೇವಲ ಸಂವಹನ ಮಾಧ್ಯಮ ಮಾತ್ರವಾಗಿರದೆ ಭಾಷೆಯೊಂದು ಬದುಕು ಎಂಬುದು ನಮಗೆ ತಿಳಿದಿದೆ. ನಮ್ಮ ಭಾಷೆಯನ್ನು ದಮನ ಮಾಡುವ ಮತ್ತೊಂದು ಭಾಷೆಯ ಸಂಪರ್ಕವೇ ನಮಗೆ ಬೇಡ ಎನ್ನುವುದಾದರೆ, ಆ ಭಾಷೆಯಿಂದ ನಮಗೆ ಉಂಟಾಗುತ್ತಿರುವ ಎಲ್ಲ ಬಗೆಯ ಅನುಭವ ಹಾಗೂ ಉಪಯೋಗಗಳನ್ನು ನಿರಾಕರಿಸಲೇ ಬೇಕು. ಇದು ಸಾಧ್ಯವೇ?

ಇನ್ನು ಜಾಗತೀಕರಣ ಮತ್ತು ಸಾಹಿತ್ಯದ ವಿಚಾರ. ಸಾಹಿತ್ಯವು ಒಂದು ಭಾಷಿಕ ಅಭಿವ್ಯಕ್ತಿ ಎಂಬುದು ನಮಗೆ ತಿಳಿದಿರುವ ವಿಚಾರವೇ. ಸಾಹಿತ್ಯದ ಅಭಿವ್ಯಕ್ತಿ ಮಾಧ್ಯಮವಾದ ಭಾಷೆಯಲ್ಲಿ ಆಗುತ್ತಿರುವ ಪಲ್ಲಟಗಳು ಸಾಹಿತ್ಯದ ಮೇಲೂ ಮೂಡಬಲ್ಲವು. ಈಗಾಗಲೇ ಮೇಲೆ ಉಲ್ಲೇಖಿಸಿರುವಂತೆ ಕನ್ನಡ ಸಾಹಿತ್ಯವೂ ತನ್ನ ಒಳಗೇ ಇದ್ದ ಅನ್ಯ ಜಗತ್ತುಗಳೊಡನೆ ಒಡನಾಡುತ್ತಾ ಸಾಗಿ ಬಂದಿದೆ. ಹಾಗೆಯೇ ತೊಂಬತ್ತರ ದಶಕದಲ್ಲಿ ಮೂಡಿರುವ ಆಧುನಿಕ ರಾಷ್ಟ್ರ ಪ್ರಭುತ್ವಗಳಿಗಿರುವ ಭೌಗೋಳಿಕ ಎಲ್ಲೆಗಳನ್ನೇ ಇಲ್ಲವಾಗಿಸುವ ಇಡೀ ಜಗತ್ತು ಒಂದು ವಿಶ್ವಗ್ರಾಮ ಎಂದು ಹೇಳುವ ಅಥವಾ ಹುನ್ನಾರ ಮಾಡುತ್ತಿರುವ ಜಾಗತೀಕರಣವನ್ನು ಅರಗಿಸಿ ತನ್ನೊಳಗೆ ಇಳಿಸಿಕೊಂಡು ಬೆಳೆಯುವ ಶಕ್ತಿ ಕನ್ನಡ ಸಾಹಿತ್ಯಕ್ಕೆ ಇದೆ.

ಪಂಪನ ಕಾವ್ಯಗಳು ಮುಖಾಮುಖಿಯಾಗಿರುವುದು ಕನ್ನಡಕ್ಕೆ ಅನ್ಯ ಜಗತ್ತೇ ಆಗಿದ್ದ ಸಂಸ್ಕೃತದ ಜಿನಸೇನಾಚಾರ್ಯರ 'ಪೂರ್ವಪುರಾಣ' ಮತ್ತು ವ್ಯಾಸಭಾರತಕ್ಕೆ. ಕವಿರಾಜಮಾರ್ಗ ತನ್ನ ಮಾರ್ಗವನ್ನು ಕಂಡುಕೊಂಡಿರುವುದು ಮತ್ತದೇ ಸಂಸ್ಕೃತ ಜಗತ್ತಿಗೆ ಎದುರಾಗಿಯೇ. ವಚನ ಚಳವಳಿ ತನ್ನ ಅಸ್ಮಿತೆಯನ್ನು ಕಂಡುಕೊಂಡಿರುವು ವೈದಿಕ ಜಗತ್ತಿಗೆ ಮುಖಾಮುಖಿಯಾಗುತ್ತಲೇ. ಹೀಗೆ ಎಲ್ಲ ಕಾಲದ ಕನ್ನಡ ಸಾಹಿತ್ಯ ತನ್ನದಲ್ಲದ ಅನ್ಯ ಜಗತ್ತಿನೊಡನೇ ಸಂಘರ್ಷಕ್ಕಿಳಿಯುತ್ತಲೇ ತಾನು ಸೃಜನಶೀಲವಾಗುತ್ತಾ ಬೆಳೆದಿದೆ. ಈ ಕುರಿತು ಡಿ.ಆರ್. ನಾಗರಾಜ್ ಅವರ 'ಸಾಹಿತ್ಯಕಥನ' ಕೃತಿಯಲ್ಲಿನ 'ಸಂಸ್ಕೃತಿಗಳ ಮುಖಾಮುಖಿ' ಲೇಖನ ಮಹತ್ವದ ವಿಚಾರಗಳನ್ನು ಮಂಡಿಸುತ್ತದೆ. ಹೀಗೆಯೇ ಇಂದಿನ ಮಾರುಕಟ್ಟೆಕೇಂದ್ರಿತ ಜಾಗತೀಕರಣ ಕನ್ನಡ ಭಾಷೆಯಲ್ಲಿನ ಪಲ್ಲಟಗಳಿಗೆ ಕಾರಣವಾರೂ ಸಾಹಿತ್ಯ ತನ್ನ ಅನನ್ಯತೆಯನ್ನು ಬಿಟ್ಟುಕೊಡಲಾರದು. ಆದರೆ ಜಾಗತೀಕರಣದ ಜೀವನವಿಧಾನ ಸಾಹಿತ್ಯದ ವಸ್ತು, ಅಭಿವ್ಯಕ್ತಿಯಲ್ಲಿ ಬದಲಾವಣೆಗಳನ್ನು ತರಬಲ್ಲದು. ಆದರೆ ಈ ಬದಲಾವಣೆಗಳು ಈ ಕಾಲದ ಬಿಕ್ಕಟ್ಟುಗಳನ್ನು ದಾಖಲಿಸುತ್ತಲೇ ಸಾಹಿತ್ಯದ ಸೃಜನಶೀಲ ಆಯಾಮಗಳೇ ಆಗಿ ಮಾರ್ಪಡುತ್ತವೆ. ಈ ಹಿನ್ನಲೆಯಲ್ಲಿ ತೇಜಸ್ವಿ ಅವರ 'ಜುಗಾರಿಕ್ರಾಸ್' ಕಾದಂಬರಿ ಮತ್ತು ಈ ಕಾದಂಬರಿಯೊಳಗಿನ 'ಮೇದರಹಳ್ಳಿಯ ಅವಸಾನ' ಎಂಬ ಅಧ್ಯಾಯವನ್ನು ಸೂಕ್ಷ್ಮವಾಗಿ ಗಮನಿಸಬಹುದು. ಜಾಗತೀಕರಣವೂ ಸಮಕಾಲೀನ ಸಾಹಿತ್ಯ ಅಭಿವ್ಯಕ್ತಿಗೆ ತಂದುಕೊಟ್ಟಿರುವ ಮತ್ತೊಂದು ಮಹತ್ವದ ಆಯಾಮವೆಂದರೆ, ಯಾವುದೇ ಚಳವಳಿ ಅಥವಾ ಪಂಥದ ತಾತ್ವಿಕ ಬಂಧನಕ್ಕೆ ಒಳಗಾಗಿ ತನ್ನ ಅನುಭವಕ್ಕೆ ಮೀರಿದ್ದನ್ನು ಕಲ್ಪಿಸಿಕೊಂಡು ಬರೆಯುತ್ತಾ ಕೂರದೆ ಮುಕ್ತವಾಗಿ ಬರೆವ ಬದುಕನ್ನು ಸಾಹಿತ್ಯ ಬರಹಗಾರರಿಗೆ ತಂದುಕೊಟ್ಟಿರುವುದು. ಇಂದು ಸಾಹಿತ್ಯ ಚಳುವಳಿಗಳ ಹಂಗಿಲ್ಲದೆ ಬರೆಯುತ್ತಿರುವ ಬರಹಗಾರರನ್ನು ಗಮನಿಸಿದರೆ ಈ ಮುಕ್ತ ಅಭಿವ್ಯಕ್ತಿ ನೆಲೆಗಳು ಗೋಚರಿಸುತ್ತವೆ. ಹಲವು ಪಂಥಗಳನ್ನು ದಾಟಿ ದಲಿತ ಬಂಡಾಯದಲ್ಲಿ ನಿಂತಿದ್ದ ಸಾಹಿತ್ಯಕ್ಕೆ ದಲಿತ ಬಂಡಾಯ ಸ್ತ್ರೀ ಸಂವೇದನೆಗಳೂ ಬರೆದು ಮುಗಿದ ಅನುಭವಗಳಂತೆ ತೋರುತ್ತಾ ಹೊಸ ತಲೆಮಾರಿನ ದಲಿತ- ಸ್ತ್ರೀ ಲೋಕದಿಂದ ಬರುತ್ತಿರುವ ಲೇಖಕ ಲೇಖಕಿಯರು ಇಂದು ಮುಕ್ತವಾಗಿ ಬರೆಯಲೆತ್ನಿಸುತ್ತಿದ್ದಾರೆ.

ಜಾಗತೀಕರಣವು ಹತ್ತು ಹಲವು ದಿಕ್ಕುಗಳಿಂದ ನಮ್ಮಂಥ ದೇಶಗಳನ್ನು ಬಲಿ ಹಾಕುವ ಹುನ್ನಾರ ಎಂದು ಭಾವಿಸಿದ ನಂತರವೂ ಜಾತೀಕೇಂದ್ರಿತ ಭಾರತದ ಸಮಾಜದೊಳಗೇ ಸ್ಪರ್ಶವೇ ಸಾಧ್ಯವಾಗದೆ. ಪರಸ್ಪರ ಅನ್ಯವಾಗೇ ಬದುಕುತ್ತಿದ್ದ ದಲಿತ ಅಸ್ಪೃಶ್ಯ ಮತ್ತು ಸ್ತ್ರೀಯರಿಗೆ ಮಹತ್ವದ ಬಿಡುಗಡೆಯ ಹಾದಿಯೂ ಆಗಿದೆ ಎಂಬುದನ್ನು ಮರೆಯಬಾರದು. ವಸಾಹತೀಕರಣ ಮತ್ತು ಅದರ ಫಲವಾದ ಆಧುನೀಕರಣ ಈ ಬಿಡುಗಡೆಯನ್ನು ನೀಡಿತಾದರೂ ಇನ್ನಷ್ಟು ನಿಚ್ಚಳವಾಗಿ ಮುಕ್ತಗೊಳಿಸಿದ್ದು ಜಾಗತೀಕರಣವೇ. 'ಕುಸುಮಬಾಲೆ'ಯ ವಸ್ತುವನ್ನು ಇಟ್ಟುಕೊಂಡು ಈಹೊತ್ತು ಕಾದಂಬರಿ ಬರೆದರೆ ಅಲ್ಲಿನ ಚನ್ನನ್ನು ಕಳೆದುಕೊಂಡ ಕುಸುಮ ಮತ್ತು ಅವನ ಅಪ್ಪ ಅಮ್ಮನ ಹತಾಶೆ ಮತ್ತು ದುಃಖದ ಮೂಲಕ ಓದುಗರನ್ನು ತೀವ್ರವಾಗಿ ತಟ್ಟಲಾಗದು ಅನಿಸುತ್ತದೆ. ಜಾತಿಯನ್ನು ಪರಿಗಣಿಸದೆ ಆತ್ಮಗೌರವವನ್ನು ನಿರಾಕರಿಸದೆ ಜಾಗತೀಕರಣವು ಇಂದು ನಮ್ಮೆದುರು ತಂದು ಸುರಿಯುತ್ತಿರುವ ಅಪಾರ ದುಡಿಯುವ ಅವಕಾಶಗಳು ನಮ್ಮನ್ನು ಅವಮಾನಗಳಿಂದ ಪಾರುಮಾಡಬಲ್ಲವು. ಮಹಾ ಮಂತ್ರವಾದಿಗಳ ಬಗೆ ಬಗೆಯ ಹೊಡೆತಗಳನ್ನು ತಿನ್ನುತ್ತಾ I want to be in my home ಎಂದು ಹೇಗೋ ಇಂಗ್ಲಿಶ್ ಮಾತಾಡುವ ಕುಸುಮ ತನ್ನ ಮಗುವಿನೊಡನೆ ಚೆನ್ನನೊಡನೆ ನಗರ ಸೇರಿ ಹಳೆಯ ಜಾತಿಯ ಸೋಂಕು ಇಲ್ಲದಂತೆ ಬಾಳಿಬಿಡಬಹುದು. ಈ ಮಾತು, ನಮ್ಮ ಸಮಾಜದ ಸಂಕೀರ್ಣವಾದ ಜಾತಿ ವ್ಯವಸ್ಥೆಯಲ್ಲಿ ಕೊಂಚ ಬಿಡುಬೀಸಾದ ಹೇಳಿಕೆ ಅನಿಸಿದರೂ ನಿರಾಕರಿಸಲು ಅಸಾಧ್ಯವೆನಿಸುತ್ತದೆ.

**ಪರಾಮರ್ಶನ ಕೃತಿಗಳು:**


1. ಎಡ್ವರ್ಡ್ ಸೈದ್, ಶೆಲ್ಲಿ ವಾಲಿಯಾ, ಅನು: ರಾಮಲಿಂಗಪ್ಪ ಟಿ ಬೇಗೂರು, ಚಂದ್ರಗಿರಿ ಪ್ರತಿಷ್ಠಾನ, ಬೆಂಗಳೂರು, 2009
2. ಜಾಗತೀಕರಣ ಮತ್ತು ಗ್ರಾಮ ಭಾರತ, ಎನ್. ಜಗದೀಶ್ ಕೊಪ್ಪ, ಸಿಂಚನ ಗ್ರಂಥ ಮಾಲೆ, ಹಾವೇರಿ, 2009
3. ಸಂಸ್ಕೃತಿ ಕಥನ, ಡಿ.ಆರ್. ನಾಗರಾಜ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002


**Citation:** ಡಾ. ಜಯಶಂಕರ ಎಂ. 2025. "ಜಾಗತೀಕರಣ: ಕನ್ನಡ ನುಡಿ ಮತ್ತು ಸಾಹಿತ್ಯ". International Journal of Academic Research, 12(4): 203-206.

**Copyright:** ©2025 ಡಾ. ಜಯಶಂಕರ ಎಂ. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.